ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	332
ಉತ್ತರಿಸಬೇಕಾದ ದಿನಾಂಕ	:	18.02.2022
ಉತ್ತರಿಸುವ ಸಚಿವರು	:	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಬಹುತೇಕ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಮಂಜೂರಾಗಿರುವ ಹುದ್ದೆಗಳಿಗೆ ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯ ವಿವಿಧ ವೃಂದಗಳ ಅಧಿಕಾರಿ/ ಸಿಬ್ಬಂದಿಗಳು ಶಾಶ್ವತವಾಗಿ ವಿಲೀನಗೊಂಡಿರುವವರನ್ನು ಹೊರತುಪಡಿಸಿ ಉಳಿದ ಹುದ್ದೆಗಳು ಖಾಲಿಯಿರುತ್ತದೆ.
ಆ)	ಪ್ರಸ್ತುತ ಈ ವಿಭಾಗಗಳಲ್ಲಿ ಸಾಕಷ್ಟು ಹುದ್ದೆಗಳು ಖಾಲಿ ಇರುವುದರಿಂದ, ಗುತ್ತಿಗೆದಾರರಿಗೆ ಬಿಲ್‌ಗಳು ಸಕಾಲದಲ್ಲಿ ಪಾವತಿಯಾಗದೆ, ಕಾಮಗಾರಿಗಳ ಪ್ರಗತಿ ಕುಂಠಿತವಾಗಿದ್ದು, ಈ ಕುರಿತು ಸರ್ಕಾರ ಇದುವರೆಗೆ ಏನು ಕ್ರಮ ಕೈಗೊಂಡಿದೆ;	ಖಾಲಿಯಿರುವ ಹುದ್ದೆಗಳಿಗೆ ಲೋಕೋಪಯೋಗಿ ಇಲಾಖೆ ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಗಳ ತಾಂತ್ರಿಕ ಸಿಬ್ಬಂದಿ ಮತ್ತು ಇತರೆ ಸಿಬ್ಬಂದಿಗಳ ಸೇವೆಯನ್ನು ನಿಯೋಜನೆ ಮೇಲೆ ಪಡೆದು ಕಾಮಗಾರಿಗಳ ಪ್ರಗತಿ ಕುಂಠಿತವಾಗದಂತೆ ಕೆಲಸ ನಿರ್ವಹಿಸಲಾಗುತ್ತಿದೆ. ಅಲ್ಲದೇ ಹಾಲಿ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ವಿವಿಧ ಅಧಿಕಾರಿ/ ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿಸುವ ಮೂಲಕ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತಿದೆ.

ಇ)	ಕೊಡಗು ಜಿಲ್ಲೆಗೆ ಈ ಎರಡೂ ವಿಭಾಗಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ ಮತ್ತು ಪ್ರಸ್ತುತ ಎಷ್ಟು ಹುದ್ದೆಗಳು ಖಾಲಿ ಇವೆ:	ಕೊಡಗು ಜಿಲ್ಲೆಯ ಪಂ.ರಾ.ಇಂ. ಮತ್ತು ಗ್ರಾ.ಕು.ನೀ.&ನೈ ವಿಭಾಗ & ಉಪ ವಿಭಾಗಗಳಲ್ಲಿನ ಹುದ್ದೆಗಳ ವಿವರ ಈ ಕೆಳಕಂಡಂತಿದೆ: (see table below)
ಈ)	ಕೊಡಗು ಜಿಲ್ಲೆಯಲ್ಲಿ ಈ ಎರಡೂ ವಿಭಾಗಗಳಲ್ಲಿ ಗುತ್ತಿಗೆದಾರರಿಗೆ ಸಂದಾಯವಾಗಬೇಕಿರುವ ಬಾಕಿ ಹಣದ ಮೊತ್ತವೆಷ್ಟು ಮತ್ತು ಇದುವರೆಗೂ ಬಾಕಿ ಹಣ ಸಂದಾಯವಾಗದೆ ಇರಲು ಕಾರಣಗಳೇನು:	ಕೊಡಗು ಜಿಲ್ಲೆಯಲ್ಲಿ ಪಂ.ರಾ.ಇಂ. ವಿಭಾದಲ್ಲಿ ಲೆಕ್ಕಶೀರ್ಷಿಕೆ "5054" ರಡಿ ಒಟ್ಟು ರೂ.4640.00 ಲಕ್ಷಗಳ ಅನುದಾನದಲ್ಲಿ ರೂ.2898.89 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಈ ಮೊತ್ತವು ಸಂಪೂರ್ಣವಾಗಿ ವೆಚ್ಚವಾಗಿರುತ್ತದೆ. ಉಳಿದಂತೆ, ಗುತ್ತಿಗೆದಾರರಿಗೆ ಸಂದಾಯವಾಗಲು ರೂ.1649.00 ಲಕ್ಷಗಳ ಬಾಕಿ ಬಿಲ್ಲು ಇರುತ್ತದೆ. SDRF (ಮಳೆಹಾನಿ) ಯೋಜನೆಯಡಿಯಲ್ಲಿ ರೂ.4000.00 ಲಕ್ಷ ಮತ್ತು ಹೆಚ್ಚುವರಿಯಾಗಿ ರೂ.500.00 ಲಕ್ಷಗಳ ಅನುದಾನ ಸೇರಿದಂತೆ, ಒಟ್ಟು ರೂ.4500.00 ಲಕ್ಷಗಳ ಅನುದಾನದಲ್ಲಿ ರೂ.2700.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಗುತ್ತಿಗೆದಾರರಿಗೆ ಪಾವತಿಯಾಗಿರುತ್ತದೆ.
		ಪ್ರಸ್ತುತ ರೂ.764.00 ಲಕ್ಷಗಳ ಮೊತ್ತ ಬಿಡುಗಡೆಯಾಗಿದ್ದು, ಬಾಕಿ ಅನುದಾನ ಬಿಡುಗಡೆಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.
		ಕೊಡಗು ಜಿಲ್ಲಾ ವ್ಯಾಪ್ತಿಯ ಗ್ರಾ.ಕು.ನೀ.&ನೈ ವಿಭಾಗ ಕಛೇರಿಗೆ ಜೆ.ಜೆ.ಎಂ. ಯೋಜನೆಯಡಿ ಒಟ್ಟು ರೂ.9.00 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಗುತ್ತಿಗೆದಾರರಿಗೆ ಪಾವತಿ ಮಾಡಲಾಗುತ್ತಿದೆ.

ವಿಭಾಗ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ
ಪಂ.ರಾ.ಇಂ. ವಿಭಾಗ	52	22	30
ಗ್ರಾ.ಕು.ನೀ.&ನೈ ವಿಭಾಗ	56	10	46